		2013-14	40226	43730969
	Total		89880	98960509
2	Post-Matric-Scholarship	2011-12	3554	14173190
		2012-13	2443	12035429
		2013-14	3412	18536740
	Total		9409	44745359
3	Metric-Cum-Means Scholarship	2011-12	51	1350500
		2012-13	124	4067345
		2013-14	512	12149102
	Total		**687**	**17836947**
	Grand Total		**99976**	**161542815**

ರಾಜ್ಯ ಹೆದ್ದಾರಿಗಳ ಸಮಗ್ರ ಅಭಿವೃದ್ಧಿ

1844 (3102); ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಅ) ರಾಜ್ಯ ಹೆದ್ದಾರಿಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರದ ಯೋಜನೆಗಳೇನು; ಕಳೆದ ಮೂರು ವರ್ಷಗಳಲ್ಲಿ ಮಾಡಿದ ವೆಚ್ಚದ ವಿವರಗಳೇನು;

ಆ) ರಾಜ್ಯದ ಹೆದ್ದಾರಿಗಳ ಅಭಿವೃದ್ಧಿಗಾಗಿ ವಿಶ್ವಬ್ಯಾಂಕ್ ನೀಡಿದ ಅನುದಾನ ಎಷ್ಟು; ಕೇಂದ್ರ ಸರ್ಕಾರದ ಅನುದಾನದ ವಿವರಗಳನ್ನು ನೀಡುವುದು;

ಇ) ಹಾಗಿದ್ದಲ್ಲಿ, ನೀಡಿದ ಅನುದಾನದಿಂದ ಕೈಗೊಂಡಿರುವ ವಿವರ ನೀಡುವುದು; ಅದರ ವ್ಯಾಪ್ತಿಯಲ್ಲಿ ಕೈಗೊಂಡಿರುವ ಹೆದ್ದಾರಿಗಳ ಉದ್ದ ಪ್ರಮಾಣ ವಿವರಗಳೇನು (ಸಂಪೂರ್ಣ ಮಾಹಿತಿ ನೀಡುವುದು);

ಡಾ: ಹೆಚ್. ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ರಾಜ್ಯದಲ್ಲಿ 20557 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ರಸ್ತೆ ಜಾಲವಿದ್ದು, ಈ ರಸ್ತೆಗಳ ಸ್ಥಿತಿಯನ್ನಾಧರಿಸಿ, ಪುನರ್ ನಿರ್ಮಾಣ, ಬಲಪಡಿಸುವಿಕೆ, ಅಗಲೀಕರಣ, ನವೀಕರಣ, ಪುನರ್ ಮೇಲ್ಮೈ ಡಾಂಬರೀಕರಣ ಹಾಗೂ ಘಾಟ್ ಪ್ರದೇಶದಲ್ಲಿ ಸಿಮೆಂಟ್ ರಸ್ತೆ ನಿರ್ಮಾಣ ಕಾಮಗಾರಿಗಳನ್ನು ಇಲಾಖೆಯ ಅಪೆಂಡಿಕ್ಸ್ – ಇ ನಲ್ಲಿ ಎಸ್‌ಹೆಚ್‌ಡಿಪಿ, ಕೆಶಿಫ್ ಹಾಗೂ ಕೆಆರ್‌ಡಿಸಿಎಲ್ ಸಂಸ್ಥೆಗಳ ಮೂಲಕ ಕೈಗೆತ್ತಿಕೊಳ್ಳಲಾಗುವುದು. ಕಳೆದ 3 ವರ್ಷಗಳಲ್ಲಿ ಅಭಿವೃದ್ಧಿಪಡಿಸಲಾದ ರಾಜ್ಯ ಹೆದ್ದಾರಿಗಳ ಉದ್ದ ಹಾಗೂ ವೆಚ್ಚದ ವಿವರಗಳು ಕೆಳಕಂಡಂತಿವೆ;

ವರ್ಷ	ಉದ್ದ (ಕಿ.ಮೀ.)	ವೆಚ್ಚ (ರೂ. ಲಕ್ಷಗಳಲ್ಲಿ)
2011–12	2278.58	67136.00
2012–13	3442.00	181614.34
2013–14	3725.00	225088.21

ಆ) ಕೆಶಿಫ್ ವತಿಯಿಂದ, 1220 ಕಿ.ಮೀ. ಗಳ ರಾಜ್ಯ ಹೆದ್ದಾರಿ ಅಭಿವೃದ್ಧಿಯನ್ನು ವಿಶ್ವ ಬ್ಯಾಂಕ್‌ನ ` 1575 ಕೋಟಿ ನೆರವಿನಲ್ಲಿ ಹಾಗೂ 616 ಕಿ.ಮೀ. ಗಳ ರಾಜ್ಯ ಹೆದ್ದಾರಿ ಅಭಿವೃದ್ಧಿಯನ್ನು ಏಷಿಯನ್ ಅಭಿವೃದ್ಧಿ ಬ್ಯಾಂಕ್‌ನ `1463 ಕೋಟಿ ನೆರವಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಕೆ.ಆರ್.ಡಿ.ಸಿ.ಎಲ್ ವತಿಯಿಂದ ವಿಶ್ವಬ್ಯಾಂಕ್ ನೆರವಿನಿಂದ ಕೋ–ಫೈನಾನ್ಸ್ ಯೋಜನೆ ಅಡಿಯಲ್ಲಿ ಸುಮಾರು 381.40 ಕಿ.ಮೀ. ಉದ್ದದ 7 ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಈ ಯೋಜನೆಗಾಗಿ ವಿಶ್ವಬ್ಯಾಂಕ್ ಅಂದಾಜು ರೂ. 390.00 ಕೋಟಿಗಳನ್ನು ನೀಡಲಿದೆ.

ಕೇಂದ್ರ ಸರ್ಕಾರವು ಕಳೆದ 3 ವರ್ಷಗಳ ಅವಧಿಯಲ್ಲಿ 13ನೇ ಹಣಕಾಸು ಆಯೋಗದ ಅನುದಾನದಡಿಯಲ್ಲಿ ಆಯವ್ಯಯದ ಮೂಲಕ ಒದಗಿಸಲಾದ ಅನುದಾನದ ವಿವರ ಕೆಳಕಂಡಂತಿದೆ:

ವರ್ಷ	ಅನುದಾನ (ರೂ. ಲಕ್ಷಗಳಲ್ಲಿ)
2011–12	16515.00
2012–13	17595.00
2013–14	18810.00

ಇ) ವಿಶ್ವಬ್ಯಾಂಕ್ ಹಾಗೂ ಏಷಿಯನ್ ಅಭಿವೃದ್ಧಿ ಬ್ಯಾಂಕ್‌ನಿಂದ ಪಡೆದ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾದ ರಸ್ತೆ ಅಭಿವೃದ್ಧಿ ಕಾಮಗಾರಿಗಳ ವಿವರ ಗಳನ್ನು ಅನುಬಂಧ–1 ರಲ್ಲಿ ಒದಗಿಸಿದೆ.

ಕೆ.ಆರ್.ಡಿ.ಸಿ.ಎಲ್ ವತಿಯಿಂದ ಕೈಗೆತ್ತಿಕೊಳ್ಳಲಾಗುವ ರಸ್ತೆ ನಿರ್ಮಾಣ ವೆಚ್ಚವನ್ನು ವಿಶ್ವಬ್ಯಾಂಕ್‌ದಿಂದ ಶೇಕಡ 20, ಕೆ.ಆರ್.ಡಿ.ಸಿ.ಎಲ್ ದಿಂದ ಶೇಕಡ 20 ಮತ್ತು ರಿಯಾಯಿತಿದಾರರಿಂದ ಶೇಕಡ 60 ಭರಿಸ ಬೇಕಾಗಿರುತ್ತದೆ. 2 ವರ್ಷ ನಿರ್ಮಾಣ ಅವಧಿ ಹಾಗೂ 8 ವರ್ಷ ನಿರ್ವಹಣೆ ಅವಧಿಯನ್ನು ಒಳಗೊಂಡಂತೆ ಒಟ್ಟು ರಿಯಾಯಿತಿ ಅವಧಿ 10 ವರ್ಷಗಳಾಗಿರುತ್ತದೆ. ರಿಯಾಯಿತಿದಾರನ ಹೂಡಿಕೆಯನ್ನು 8 ವರ್ಷಗಳ ಕಾಲ ವರ್ಷಾಸನದ ಮುಖಾಂತರ ಹಿಂದಿರುಗಿಸಲಾಗುತ್ತದೆ. ರಸ್ತೆ ಕಾಮಗಾರಿಗಳ ವಿವರಗಳನ್ನು ಅನುಬಂಧ–2 ರಲ್ಲಿ ಒದಗಿಸಿದೆ.

13ನೇ ಹಣಕಾಸು ಆಯೋಗದ ಅನುದಾನದಡಿ ಕಳೆದ ಮೂರು ವರ್ಷಗಳಲ್ಲಿ ಕೈಗೊಳ್ಳಲಾದ ರಾಜ್ಯ ಹೆದ್ದಾರಿಗಳ ಉದ್ದದ ವಿವರ ಕೆಳಕಂಡಂತಿದೆ:

ವರ್ಷ	ಉದ್ದ (ಕಿ. ಮೀ.)
2011–12	825
2012–13	700
2013–14	871

ಅನುಬಂಧ – 1

ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ–2 ಬಗ್ಗೆ ಸಂಕ್ಷಿಪ್ತ ಟಿಪ್ಪಣಿ (ಮೇ–2014)

ಕೆಶಿಪ್–1 ಯೋಜನೆಯ ಯಶಸ್ವಿಯಿಂದ ಉತ್ತೇಜಿತವಾಗಿ, ರಾಜ್ಯ ಸರ್ಕಾರವು ರಾಜ್ಯ ಪ್ರಮುಖ ರಸ್ತೆ ಜಾಲದ ಇನ್ನಷ್ಟು ರಾಜ್ಯ ಹೆದ್ದಾರಿಗಳ ಅಭಿವೃದ್ಧಿಯನ್ನು ಕೆಶಿಪ್–2 ಅಡಿಯಲ್ಲಿ ಕೈಗೊಳ್ಳಲು ದಿನಾಂಕ 29.09.2005 ಮತ್ತು 10.11.2006ರಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಸರ್ಕಾರವು ನಿರ್ಧರಿಸಿದ್ದು 3411 ಕಿ.ಮೀ.ಗಳ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದ ಆದೇಶ ಸಂಖ್ಯೆ: ಲೋಇ:61:ಇಎಪಿ:2006 ದಿನಾಂಕ: 25.11.2006ರಲ್ಲಿ ಅನುಮೋದನೆ ನೀಡಿರುತ್ತದೆ.

ಈ ಯೋಜನೆಯಡಿ, ರಸ್ತೆಗಳನ್ನು 7 ಮೀ. ಅಗಲದ ಎರಡು ಪಥದ ರಸ್ತೆಯನ್ನಾಗಿ 1.50 ಮೀ. ಅಗಲದ ಗಟ್ಟಿ ಭುಜ ಹಾಗೂ 1.0 ಮೀ. ಅಗಲದ ಮೃದು ಭುಜ ಒಳಗೊಂಡಂತೆ ಹಾಗೂ ಅಗತ್ಯ ವಿನ್ಯಾಸ ತಿದ್ದುಪಡಿಗಳ ಸಹಿತ ಅಭಿವೃದ್ಧಿಗೊಳಿಸಲಾಗುತ್ತಿದೆ.

ಕೆಶಿಪ್–2 ಯೋಜನೆಯನ್ನು ವಿಶ್ವಬ್ಯಾಂಕ್‌ನ US$ 350 ಮಿಲಿ ಯನ್ ಗಳ ಸಾಲದ ನೆರವಿನಲ್ಲಿ ಹಾಗೂ ಏಷಿಯನ್ ಅಭಿವೃದ್ಧಿ ಬ್ಯಾಂಕ್‌ನ US$ 315 ಮಿಲಿಯನ್‌ಗಳ ಸಾಲದ ನೆರವಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ವಿಶ್ವ ಬ್ಯಾಂಕ್ ನೆರವಿನ್ ಯೋಜನೆ:

ವಿಶ್ವ ಬ್ಯಾಂಕ್‌ನ ಆರ್ಥಿಕ ನೆರವಿನಲ್ಲಿ ಕೆಶಿಪ್–2 ಯೋಜನೆಯಡಿ 1220 ಕಿ.ಮೀ.ಗಳ ರಾಜ್ಯ ಅಭಿವೃದ್ಧಿಯನ್ನು ` 4522 ಕೋಟಿ ಯೋಜನಾ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು ಇದರಲ್ಲಿ `1575 ಕೋಟಿ (US$ 350 ಮಿಲಿಯನ್) ಗಳನ್ನು ವಿಶ್ವಬ್ಯಾಂಕ್‌ನಿಂದ ಸಾಲದ ರೂಪದಲ್ಲಿ ನೆರವು ಪಡೆಯ ಲಾಗಿದೆ. ಈ ಯೋಜನೆಯಡಿ ರಸ್ತೆ ಅಭಿವೃದ್ಧಿಯನ್ನು ಈ ಕೆಳಕಂಡ ಗುತ್ತಿಗೆ ರೂಪಗಳಲ್ಲಿ ಕೈಗೊಳ್ಳಲಾಗಿದೆ.

ಸಾಂಪ್ರದಾಯಿಕ ಗುತ್ತಿಗೆ (EPC contracts) (269 ಕಿ.ಮೀ.)

ಇ.ಪಿ.ಸಿ. ಗುತ್ತಿಗೆಗಳು ಸಾಂಪ್ರದಾಯಿಕ ಐಟಂ ದರ ಗುತ್ತಿಗೆಗಳಾಗಿದ್ದು ನಿರ್ಮಾಣದ ನಂತರ ಒಂದು ವರ್ಷದ ನ್ಯೂನತಾ ಅವಧಿಯನ್ನು ಒಳ ಗೊಂಡಿದ್ದು ವಿಶ್ವ ಬ್ಯಾಂಕ್‌ನಿಂದ ನಿರ್ಮಾಣ ವೆಚ್ಚದ ಶೆ. 80 ರಷ್ಟು ಸಾಲದ ನೆರವು ದೊರಕಲಿದೆ.

ಈ ಗುತ್ತಿಗೆಗಳಡಿಯಲ್ಲಿ 269 ಕಿ.ಮೀ.ಗಳ ರಾಜ್ಯ ಹೆದ್ದಾರಿಗಳನ್ನು ` 596 ಕೋಟಿ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಇದರಲ್ಲಿ 6 ಗುತ್ತಿಗೆಳು ಇದ್ದು 18 ರಿಂದ 36 ತಿಂಗಳುಗಳ ಅವಧಿಯದ್ದಾಗಿರುತ್ತದೆ. ಸದರಿ ಕಾಮಗಾರಿಗಳನ್ನು ಆಗಸ್ಟ್ 2011 ರಲ್ಲಿ ಪ್ರಾರಂಭಿಸಲಾಗಿದ್ದು ಗುತ್ತಿಗೆ ವಿವರಗಳು ಕೆಳಗಿನಂತಿದೆ.

ಗುತ್ತಿಗೆ ನಂ.	ಕಾಮಗಾರಿ ಹೆಸರು	ಉದ್ದ (ಕಿ.ಮೀ.)	ಗುತ್ತಿಗೆಯ ಮೊತ್ತ (ರೂ. ಕೋಟಿ ಗಳಲ್ಲಿ)
WEP-1	ಹೊಸಕೋಟೆಯಿಂದ ಚಿಂತಾಮಣಿ ವರೆಗಿನ ಮೇಲ್ದರ್ಜೆಗೇರಿಸುವ ರಸ್ತೆ ಕಾಮಗಾರಿ	52.40	98.22

WEP2A	ಹಾವೇರಿ ಯಿಂದ ಹಾನಗಲ್ (ಎನ್.ಹೆಚ್–4) ವರೆಗಿನ ಮೇಲ್ದರ್ಜೆ ಗೇರಿಸುವ ರಸ್ತೆ ಕಾಮಗಾರಿ	31.78	92.53
WEP2B	ಹಾನಗಲ್ ನಿಂದ ತಡಸಾ ವರೆಗಿನ ಮೇಲ್ದರ್ಜೆಗೇರಿಸುವ ರಸ್ತೆ ಕಾಮಗಾರಿ	43.50	97.87
WEP-3	ಧಾರವಾಡ ದಿಂದ ಸೌದತ್ತಿ ವರೆಗಿನ ಮೇಲ್ದರ್ಜೆಗೇರಿಸುವ ರಸ್ತೆ ಕಾಮಗಾರಿ	38.50	84.44
WEP-4	ತಿಂತಿಣಿ ಯಿಂದ ಕಲ್ಮಲಾ ವರೆಗಿನ ಮೇಲ್ದರ್ಜೆಗೇರಿಸುವ ರಸ್ತೆ ಕಾಮಗಾರಿ	73.80	160.68
WEP-5	ಚೌಡಾಪುರ ದಿಂದ ಗುಲ್ಬರ್ಗಾ ವರೆಗಿನ ಮೇಲ್ದರ್ಜೆಗೇರಿಸುವ ರಸ್ತೆ ಕಾಮಗಾರಿ	28.63	61.55
		268.61	**595.29**

ಇದುವರೆಗೆ 161 ಕಿ.ಮೀ.ಗಳನ್ನು ` 341 ಕೋಟಿಗಳ ವೆಚ್ಚದಲ್ಲಿ ಮೇ ಮಾಹೆಯ ಅಂತ್ಯಕ್ಕೆ ಪೂರ್ಣಗೊಳಿಸಲಾಗಿರುತ್ತದೆ.

ವರ್ಷಾಸನ ಗುತ್ತಿಗೆ (Annuity Contracts) 565 ಕಿ.ಮೀ.

ಈ ಗುತ್ತಿಗೆಗಳಡಿ ಕಾಮಗಾರಿಗಳನ್ನು ಹೈಬ್ರಿಡ್ (Hybrid Annuity) ವರ್ಷಾಸನ ಮಾದರಿಯಲ್ಲಿ ಕೈಗೊಳ್ಳಲು ಯೋಜಿಸಲಾಗಿದೆ. ಈ ಮಾದರಿಯಲ್ಲಿ ನಿರ್ಮಾಣ ವೆಚ್ಚದ ಶೇಕಡ. 50 ರಷ್ಟು ಭಾಗವನ್ನು ವಿಶ್ವಬ್ಯಾಂಕ್ ಆರ್ಥಿಕ ನೆರವಿನಲ್ಲಿ ಭರಿಸಲಾಗುವುದು. ಉಳಿದಂತೆ, ರಾಜ್ಯ ಸರ್ಕಾರದ ವತಿಯಿಂದ ವರ್ಷಾಸನ ರೂಪದಲ್ಲಿ ಭರಿಸಲಾಗುವುದು. ಈ ಗುತ್ತಿಗೆಗಳು 10 ವರ್ಷದ

ಅವಧಿಯದ್ದಾಗಿದ್ದು, 2 1/2 ವರ್ಷಗಳ ನಿರ್ಮಾಣ ಅವಧಿ ಹಾಗೂ 7 1/2 ವರ್ಷಗಳ ನಿರ್ವಹಣಾ ಅವಧಿ ಹೊಂದಿರುತ್ತದೆ. ಈ ಮಾದರಿಯಲ್ಲಿ 565 ಕಿ.ಮೀ.ಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಗುತ್ತಿಗೆ ವಿವರಗಳು ಕೆಳಗಿನಂತಿದೆ.

ಗುತ್ತಿಗೆ ಪ್ಯಾಕೇಜ್ ಸಂ.	ಕಾಮಗಾರಿ ಹೆಸರು	ಉದ್ದ (ಕಿ.ಮೀ)	ಕಾಮಗಾರಿಯ ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ)
WAP1	ಮಳವಳ್ಳಿ–ಮದ್ದೂರು–ಹುಲಿಯೂರುದುರ್ಗ–ಕುಣೀಗಲ್–ತುಮಕೂರು–ಕೊರಟಗೆರೆ–ಮಧುಗಿರಿ–ಪಾವಗಡ ವರೆಗಿನ ಮೇಲ್ದರ್ಜೆಗೇರಿಸುವ ರಸ್ತೆ ಕಾಮಗಾರಿ	193.34	575.88
WAP2	ಮುಧೋಳ–ಮಹಾಲಿಂಗಾಪೂರ–ಕಬ್ಬೂರು–ಚಿಕ್ಕೋಡಿ–ವರೆಗಿನ ಮೇಲ್ದರ್ಜೆಗೇರಿಸುವ ರಸ್ತೆ ಕಾಮಗಾರಿ	107.937	330.91
WAP3	ಶಿಕಾರಿಪುರ ದಿಂದ ಆನಂದಪುರಂ ಮತ್ತು ಶಿವಮೊಗ್ಗ–ಸಾವಲಂಗ–ಶಿಕಾರಿಪುರ–ಶಿರಾಳಕೊಪ್ಪ–ತೊಗರ್ಸಿ–ಆನವಟ್ಟಿ– ಗೊಂಡಿ–ಹಾನಗಲ್ ವರೆಗಿನ ಮೇಲ್ದರ್ಜೆಗೇರಿಸುವ ರಸ್ತೆ ಕಾಮಗಾರಿ	153.665	375.58
WAP4	ಮನಗುಳಿ–ಬಸವನಬಾಗೇವಾಡಿ–ತಾಳಿಕೋಟೆ–ಹುಣಸಗಿ–ದೇವಪುರ	109.953	263.48

	ವರೆಗಿನ ಮೇಲ್ದರ್ಜೆಗೇರಿಸುವ ರಸ್ತೆ ಕಾಮಗಾರಿ		
		584.895	**1545.85**

ನಾಲ್ಕು ಗುತ್ತಿಗೆ ಕಾಮಗಾರಿಗಳಲ್ಲಿ ಸರ್ಕಾರಕ್ಕೆ ಮೌಲ್ಯ ಒದಗಿಸುವ WAP1 ಹಾಗೂ WAP2 ಪ್ಯಾಕೇಜ್‌ಗಳ ಒಟ್ಟು 300 ಕಿಮೀ. ಬಿಡ್‌ಗಳನ್ನು ಸರ್ಕಾರ ಅನುಮೋದಿಸಿದ್ದು ಈ ಸದರಿ ಕಾಮಗಾರಿಗಳಿಗೆ ಮಾರ್ಚ 2014ರಲ್ಲಿ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಕಾಮಗಾರಿಗಳನ್ನು ಆಗಸ್ಟ್ 2014 ರಲ್ಲಿ ಪ್ರಾರಂಭಿಸಲಾಗುವುದು. ಹಾಲಿ ವರ್ಷದಲ್ಲಿ ಮಾರ್ಚ 2015ರ ಅಂತ್ಯಕ್ಕೆ ಸುಮಾರು 31 ಕಿಮೀ.ಗಳ ರಸ್ತೆ ಅಭಿವೃದ್ಧಿಯನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ.

ಉಳಿದ 265 ಕಿ.ಮೀ.ಗಳ ಎರಡು ಗುತ್ತಿಗೆಗಳನ್ನು ಸಾಂಪ್ರದಾಯಿಕ ರೂಪದಲ್ಲಿ ಮರು ಟೆಂಡರ್ ಮಾಡಲು ನಿರ್ಧರಿಸಲಾಗಿದೆ ಹಾಗೂ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದೆ.

ಕೆ.ಆರ್.ಡಿ.ಸಿ.ಎಲ್–ಸಾರ್ವಜನಿಕ-ಖಾಸಗಿ ಸಹಯೋಗದ ಗುತ್ತಿಗೆಗಳು (386 ಕಿಮೀ)

ಕೆಶಿಪ್–2ರ 3411 ಕಿಮೀ ರಸ್ತೆಗಳಲ್ಲಿ 386 ಕಿಮೀ.ಗಳ ಆಯ್ದ ರಸ್ತೆಗಳನ್ನು ವಿಶ್ವ ಬ್ಯಾಂಕ್ ಯೋಜನೆಯ ಹೆದ್ದಾರಿ ಆಧುನೀಕರಣ ಭಾಗವಾಗಿ ಸಾರ್ವಜನಿಕ–ಖಾಸಗಿ ಸಹಯೋಗದಲ್ಲಿ ಸ್ವಂತ ಆರ್ಥಿಕ ನೆರವಿನಲ್ಲಿ ಅಭಿವೃದ್ಧಿ ಗೊಳಿಸಲು ಯೋಜಿಸಲಾಗಿದೆ. ರಸ್ತೆಗಳ ವಿವರ ಕೆಳಗಿನಂತಿದೆ.

ಗುತ್ತಿಗೆ ಸಂಖ್ಯೆ	**ಗುತ್ತಿಗೆಯ ಹೆಸರು**	**ಉದ್ದ (ಕಿ.ಮೀ.ಗಳಲ್ಲಿ)**	**ಅಂದಾಜು ವೆಚ್ಚ (ರೂ.ಕೋಟಿಗಳಲ್ಲಿ)**
1	ಬಾಗೇವಾಡಿ–ಬೈಲಹೊಂಗಲ ಸವದತ್ತಿ	61.90	165.80

2	ಬೀದರ್ (ಎಕ್ಕೇಹಳ್ಳಿ)–ಚಿಂಚೋಳಿ	61.50	137.49
3	ಹಾಸನ–ರಾಮನಾಥಪುರ–ಪಿರಿಯಾಪಟ್ಟಣ	76.70	188.82
4	ಹಿರೇಕೆರೂರು–ರಾಣೆಬೆನ್ನೂರು	58.40	153.48
5	ಮುಂಡರಗಿ–ಹಡಗಲಿ–ಹರಪನಹಳ್ಳಿ	51.70	141.27
6	ಹುನಗುಂದ–ಮುದ್ದೇಬಿಹಾಳ್–ತಾಳಿಕೋಟೆ	57.70	121.62
7	ರಾಯಬಾಗ್–ಕುಡಚಿ	18.20	41.99
	ಒಟ್ಟು	**386.10**	**950.47**

ವಿಶ್ವ ಬ್ಯಾಂಕ್ ನೆರವಿನ್ ಈ ಭಾಗದ ಅಭಿವೃದ್ಧಿ ಕಾರ್ಯಕ್ಕೆ ಕೆ.ಆರ್. ಡಿ.ಸಿ.ಎಲ್ ನ್ನು ಅನುಷ್ಠಾನ ಸಂಸ್ಥೆಯಾಗಿ ನಿಯುಕ್ತಿಗೊಳಿಸಲಾಗಿದೆ. ಸದರಿ ರಸ್ತೆಗಳ ಸಮಗ್ರ ಯೋಜನಾ ವರದಿ ಸಿದ್ಧಗೊಳಿಸಲಾಗಿದೆ ಹಾಗೂ ಯೋಜನಾ ವ್ಯವಹಾರ ಸಲಹೆಗಾರರನ್ನು ನೇಮಕ ಮಾಡಲಾಗಿದೆ ಹಣದ ಮೌಲ್ಯದ ಅಧ್ಯಯನ ಅನುಸಾರ ಮೇಲಿನ ಮೊದಲ 6 ಗುತ್ತಿಗೆಗಳನ್ನು ಹೈಬ್ರಿಡ್ ವರ್ಷಾ ಸನ ಮೂಲಕ ಕೈಗೊಳ್ಳಲು ನಿರ್ಧರಿಸಲಾಗಿದ್ದು, ಏಪ್ರಿಲ್–2014ರಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಈ ರಸ್ತೆಗಳ ನಿರ್ಮಾಣ ವೆಚ್ಚವನ್ನು ವಿಶ್ವ ಬ್ಯಾಂಕ್, ಕೆ.ಆರ್.ಡಿ.ಸಿಎಲ್. ಹಾಗೂ ಖಾಸಗಿ ಹೂಡಿಕೆ ಮೂಲಕ 20:20:60 ರ ಅನುಪಾತದಲ್ಲಿ ಭರಿಸಲಾಗುವುದು.

ಏಷಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ್ ಯೋಜನೆ (616 ಕಿ.ಮೀ)

ಏಷಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನಡಿ 616 ಕಿ.ಮೀ.ಗಳ ರಾಜ್ಯ ಹೆದ್ದಾರಿಗಳನ್ನು ಒಟ್ಟಾರೆ ಯೋಜನಾ ಮೊತ್ತ `2150 ಕೋಟಿಗಳಲ್ಲಿ

ಅನುಷ್ಠಾನಗೊಳಿಸಲಾಗುತ್ತಿದ್ದು ಎ.ಡಿ.ಬಿ.ಯಿಂದ ರೂ. 1463 ಕೋಟಿ ಆರ್ಥಿಕ ನೆರವನ್ನು ಸಾಲದ ರೂಪದಲ್ಲಿ ಪಡೆಯಲಾಗಿದೆ. ರಸ್ತೆಗಳ ಅಭಿವೃದ್ಧಿಯನ್ನು 9 ಗುತ್ತಿಗೆಗಳಡಿ ರೂ. 1151 ಕೋಟಿ ಒತ್ತದಲ್ಲಿ ಕೈಗೊಳ್ಳಲಾಗಿದೆ. ಸದರಿ ಗುತ್ತಿಗೆಗಳು 15–36 ತಿಂಗಳುಗಳ ಅವಧಿಯಾಗಿದ್ದು ಮಾರ್ಚ–2012ರಲ್ಲಿ ಪ್ರಾರಂಭಿಸಲಾಗಿದೆ. ಗುತ್ತಿಗೆ ವಿವರಗಳು ಕೆಳಗಿನಂತಿದೆ.

ಗುತ್ತಿಗೆ ಸಂ.	ಕಾಮಗಾರಿ ಹೆಸರು	ಉದ್ದ (ಕಿ.ಮೀ)	ಗುತ್ತಿಗೆಯ ಮೊತ್ತ (ರೂ. ಕೋಟಿಗಳಲ್ಲಿ)
AEP1	ಮಾಗಡಿಯಿಂದ ಎನ್.ಹೆಚ್–48 ಕೊರಟಗೆರೆ ರಾ.ಹೆ.3 ವರೆಗಿನ ಮೇಲ್ದರ್ಜೆಗೇರಿಸುವ ರಸ್ತೆ ಕಾಮಗಾರಿ	68.20	116.76
AEP2	ಪಾವಗಡ ದಿಂದ ಎ. ಪಿ. ಬಾರ್ಡರ್ ವರೆಗಿನ ಮೇಲ್ದರ್ಜೆಗೇರಿಸುವ ರಸ್ತೆ ಕಾಮಗಾರಿ	23.21	43.30
AEP3	ಗುಬ್ಬಿ ಯಿಂದ ಮಂಡ್ಯ ವರೆಗಿನ ಮೇಲ್ದರ್ಜೆಗೇರಿಸಲು ರಸ್ತೆ ಕಾಮಗಾರಿ	108.62	196.90
AEP4	ಜಗಳೂರಿನಿಂದ ಎನ್. ಹೆಚ್. 13 (9.25 ಕಿ.ಮೀ) ಮತ್ತು ಎಸ್. ಹೆಚ್. 19 ರಿಂದ ಮೊಳಕಾಲ್ಮೂರು (5.13 ಕಿ.ಮೀ) ವರೆಗಿನ ಮೇಲ್ದರ್ಜೆ ಗೇರಿಸುವ ರಸ್ತೆ ಕಾಮಗಾರಿ)	14.38	31.25
AEP5	ಪಡುಬಿದ್ರ ಯಿಂದ ಕಾರ್ಕಳ ವರೆಗಿನ ಮೇಲ್ದರ್ಜೆಗೇರಿಸುವ ರಸ್ತೆ ಕಾಮಗಾರಿ	27.80	61.48

AEP6	ದಾವಣಗೆರೆ–ಚನ್ನಗಿರಿ–ಬೀರೂರು ವರೆಗಿನ ಮೇಲ್ದರ್ಜೆಗೇರಿಸುವ ರಸ್ತೆ ಕಾಮಗಾರಿ	105.63	202.57
AEP7	ದಾವಣಗೆರೆ–ಚನ್ನಗಿರಿ–ಬೀರೂರು ವರೆಗಿನ ಮೇಲ್ದರ್ಜೆಗೇರಿಸುವ ರಸ್ತೆ ಕಾಮಗಾರಿ	63.44	121.25
AEP8	ಮುದುಗಲ್ ದಿಂದ ಗಂಗಾವತಿ ವರೆಗಿನ ಮೇಲ್ದರ್ಜೆಗೇರಿಸುವ ರಸ್ತೆ ಕಾಮಗಾರಿ	74.20	152.63
AEP9	ಸೌದತ್ತಿ–ಹುಲಿಕಟ್ಟಿ–ರಾಮದುರ್ಗ–ಎನ್.ಹೆಚ್. 218 – ಬಾದಾಮಿ–ಪಟ್ಟದಕಲ್–ಕಮಟಗಿ ವರೆಗಿನ ಮೇಲ್ದರ್ಜೆಗೇರಿಸುವ ರಸ್ತೆ ಕಾಮಗಾರಿ	130.13	225.50
		615.61	1151.66

ಇದುವರೆಗೆ 148 ಕಿ.ಮೀ.ಗಳನ್ನು ರೂ. 390 ಕೋಟಿಗಳ ವೆಚ್ಚದಲ್ಲಿ ಮೇ ಮಾಹೆಯ ಅಂತ್ಯಕ್ಕೆ ಪೂರ್ಣಗೊಳಿಸಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ಮಾಡಿದ ಒಟ್ಟಾರೆ ಯೋಜನಾ ವೆಚ್ಚ ವಿವರ ಕಳೆಗೆ ನೀಡಲಾಗಿದೆ.

ವರ್ಷ	ವಿಶ್ವಬ್ಯಾಂಕ್	ಏಶಿಯನ್ ಅಭಿವೃದ್ಧಿ ಬ್ಯಾಂಕ್
2011–12	90	106
2012–13	172	158

2013–14	195	278
2014–15	33	28
ಒಟ್ಟು	490	570

ಅನುಬಂಧ – 2

ವಿಶ್ವಬ್ಯಾಂಕ್ ನೆರವಿನಿಂದ ಕೆಆರ್‌ಡಿಸಿಎಲ್ ವತಿಯಿಂದ ಕೈಗೊಂಡಿರುವ ಹೆದ್ದಾರಿಗಳ ವಿವರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 3102

ಕ್ರ ಸಂ	ಕಾಮಗಾರಿ ಹೆಸರು	ರಸ್ತೆ ಉದ್ದ (ಕಿ.ಮೀ.ಗಳಲ್ಲಿ)	ಅಂದಾಜು ಮೊತ್ತ
1	ಬಾಗೇವಾಡಿ (ಎನ್.ಹೆಚ್–4)– ಬೈಲಹೊಂಗಲ–ಸೌದತ್ತಿ	63.29	190.70
2	ಬೀದರ್–(ಎನ್.ಹೆಚ್–9) (ಇಕೆ ಹಳ್ಳಿ)– ಚಿಂಚೋಳ್ಳಿ	60.04	181.02
3	ಹಾಸನ–ರಾಮನಾಥಪುರ– ಪಿರಿಯಾಪಟ್ಟಣ	73.54	219.11
4	ಹಿರೆಕೆರೂರು–ರಾಣೆಬೆನ್ನೂರು	58.30	205.82
5	ಮುಂಡರಗಿ–ಹಡಗಲಿ– ಹರಪನಹಳ್ಳಿ	51.21	162.59
6	ಹುನಗುಂದ–ಮುದ್ದೇಬಿಹಾಳ– ತಾಳಿಕೋಟೆ	56.82	163.92
7	ರಾಯಬಾಗ್–ಕುಡಚಿ	18.20	56.44
	ಒಟ್ಟು		**1179.60**